

ಕಣಿವೆ, ಬೆಟ್ಟ, ಗುಡ್ಡ ಎಲ್ಲೆಲ್ಲೂ ಆವರಿಸಿರುವ ಲಾ ಪಾಜ್ ನಗರ

## ಚೆ ಗುವೇರಾನ ಬೊಲಿವಿಯ

ದಕ್ಷಿಣ ಅಮೆರಿಕ ಖಂಡದ ಮಧ್ಯ ಭಾಗದಲ್ಲಿರುವ ಲ್ಯಾಂಡ್ ಲಾಕ್ಡ್ (ನೆಲಾವೃತ) ದೇಶ ಬೊಲಿವಿಯದ ಮೂರನೇ ಒಂದು ಭಾಗ ಆಂಡಿಸ್ ಪರ್ವತಗಳಿಂದ ಆವೃತವಾಗಿದೆ. ಕ್ರಿ.ಪೂ. 2ನೇ ಶತಮಾನದಲ್ಲಿ ತಿವಾನಕನ್ ಸಂಸ್ಕೃತಿಗೆ ತವರಾಗಿದ್ದ ಈ ದೇಶ, 14ನೇ ಶತಮಾನದಲ್ಲಿ ಐಮಾರಾ ಜನರು, ಅನಂತರ ಇಂಕಾ ಚಕ್ರಾಧಿಪತ್ಯದ ಅಧೀನದಲ್ಲಿತ್ತು. 1525ರಲ್ಲಿ ಬಂದ ಸ್ಪ್ಯಾನಿಷ್ ಜನರು ತಮ್ಮ ವಸಾಹತಾಗಿ ಮಾಡಿಕೊಂಡರು. 1825ರಲ್ಲಿ ಸ್ವತಂತ್ರವಾದ ಈ ದೇಶಕ್ಕೆ ದಕ್ಷಿಣ ಅಮೆರಿಕ ದೇಶಗಳ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಸಿಮೊನ್ ಬೊಲಿವರ್‌ನ ಗೌರವಾರ್ಥವಾಗಿ ಬೊಲಿವಿಯ ಎಂದು ಹೆಸರಾಯಿತು.

ಕ್ಯೂಬಾದ ಫಿಡಲ್ ಕ್ಯಾಸ್ಟ್ರೋ ಜೊತೆಗೂಡಿ ಕ್ಯೂಬಾದ ಕ್ರಾಂತಿಯಲ್ಲಿ ಭಾಗಿಯಾಗಿದ್ದ ಕಮ್ಯುನಿಸ್ಟ್ ಕ್ರಾಂತಿಕಾರಿ ಚೆ ಗುವೇರಾ ಜನಿಸಿದ್ದು, ಮಡಿದದ್ದು ಬೊಲಿವಿಯದಲ್ಲ. ಬೊಲಿವಿಯದ ಕ್ರಾಂತಿಕಾರಿ ಹೋರಾಟದಲ್ಲಿ ಚೆ ಗುವೇರಾ ಪಾತ್ರ ಅವಿಸ್ಮರಣೀಯ.

ಹಿಮದ ಟೊಪ್ಪಿಗೆಯನ್ನಿಟ್ಟುಕೊಂಡಿರುವ ಇಲಿಮನಿ ಪರ್ವತದ ಮೂರು ಶಿಖರಗಳು ಬಟ್ಟಲಿನಂತಿರುವ ಈ ನಗರವನ್ನು ದಿಟ್ಟಿಸಿ ನೋಡುತ್ತಿರುವಂತಿವೆ. ನಗರದ ಹಲವು ಭಾಗಗಳಿಂದ ಈ ಪರ್ವತವನ್ನು ಕಾಣಬಹುದು. ಸಮುದ್ರ ಮಟ್ಟದಿಂದ ಸರಿಸುಮಾರು 3650 ಮೀ. (11,975 ಅಡಿ) ಎತ್ತರದಲ್ಲಿರುವ ಲಾ ಪಾಜ್, ವಿಶ್ವದ ಅತಿ ಎತ್ತರದ ರಾಜಧಾನಿ ನಗರವಾಗಿದೆ.

ಎತ್ತರ ಎತ್ತರ ಏರು ನಡಿಗೆಯ ನಗರವಾದ್ದರಿಂದ ನಡಿಗೆಗೆ ಇದು ಹೇಳಿ ಮಾಡಿಸಿದ್ದಲ್ಲ. ಸ್ವಲ್ಪ ಹೊತ್ತಿಗೇ ಏದುಸಿರು ಉಂಟಾಗುತ್ತದೆ. ಬೋಗುಣಿಯಂತಿರುವ ನಗರದ ತಳಭಾಗದಲ್ಲಿ ಶ್ರೀಮಂತರ ಮನೆಗಳಿದ್ದರೆ, ಕಡಿಮೆ ಹಣವುಳ್ಳವರು ಎತ್ತರದ ಪ್ರದೇಶಗಳಲ್ಲಿ ವಾಸಿಸುವರು.

## ನಗರ ಸಾರಿಗೆ ‘ಮಿ ಟೆಲಿಫೆರಿಕೋ’

ಲಾ ಪಾಜ್ ನಗರದ ಎತ್ತರದ ಪ್ರದೇಶದಲ್ಲಿ ಅತ್ಯುತ್ತಮವಾಗಿ ಯೋಜಿಸಿ ರೂಪಿಸಿರುವ ಕೇಬಲ್ ಕಾರ್ ನಗರ ಸಾರಿಗೆ ವ್ಯವಸ್ಥೆಯೇ ‘ಮಿ ಟೆಲಿಫೆರಿಕೋ’. ಈ ವ್ಯವಸ್ಥೆಯು 36 ನಿಲ್ದಾಣಗಳನ್ನು ಹೊಂದಿದ್ದು, ಕೆಂಪು, ಹಳದಿ, ಹಸಿರು, ನೀಲಿ, ಕಿತ್ತಳೆ, ಬಿಳಿ, ಆಕಾಶನೀಲಿ, ನೇರಳೆ, ಕಂದು, ಮತ್ತು ಸಿಲ್ವರ್ ಬಣ್ಣದ ಮಾರ್ಗಗಳನ್ನು ಹೊಂದಿದೆ. ಅತ್ಯಂತ ಕಡಿಮೆ ದರದ, ಹೆಚ್ಚು ಉಪಯುಕ್ತವಾದ ಈ ಕೇಬಲ್ ಸಾರಿಗೆ ವ್ಯವಸ್ಥೆಯನ್ನು ಪ್ರತಿದಿನ ಒಂದೂವರೆ ಲಕ್ಷಕ್ಕೂ ಹೆಚ್ಚು ಜನರು ಉಪಯೋಗಿಸುವರು.

ಇದರಲ್ಲಿ ಕುಳಿತು ಆಂಡಿಸ್ ಪರ್ವತಗಳ ರಮಣೀಯ ಭೂದೃಶ್ಯವನ್ನು, ಕೆಳಭಾಗದ ನಗರಗಳ ದೃಶ್ಯಾವಳಿಯನ್ನು ಮತ್ತು ಹಿಮಚ್ಛಾದಿತ ಶಿಖರಗಳ ಸುಂದರ ನೋಟವನ್ನು ಅನುಭವಿಸಬಹುದು.

## ಮಾರುಕಟ್ಟೆಯ ವಿಶೇಷ

ಲಾ ಪಾಜ್‌ನಲ್ಲಿ ಆಂಡಿಯನ್ ಕರಕುಶಲ ವಸ್ತುಗಳ ಮಾರುಕಟ್ಟೆಯನ್ನು ಸುತ್ತುವುದೇ ಒಂದು ವಿಶಿಷ್ಟ ಅನುಭವ. ಸಾಂಪ್ರದಾಯಿಕ ಬೊಲಿವಿಯನ್ ಗಿಡಮೂಲಿಕೆಗಳು, ಲಾಮಾ ಉಣ್ಣೆಯಿಂದ ತಯಾರಾದ ಬಟ್ಟೆಗಳು, ಹೆಣೆದ ಸ್ವೆಟರ್‌ಗಳು, ಆಲ್ಪಾಕ ಉಣ್ಣೆಯ ಹೊದಿಕೆಗಳು, ಸಂಗೀತ ಉಪಕರಣಗಳು ಮತ್ತು ಆಭರಣಗಳು, ತಿನಿಸುಗಳು, ಹಣ್ಣುಗಳು ನೋಡಲು ಬಲು ಚೆನ್ನ. ಇಲ್ಲಿನ ಆಲೂಗೆಡ್ಡೆಗಳ ವೈವಿಧ್ಯ ಕಂಡು ನಾವು ಅಚ್ಚರಿಗೊಂಡೆವು.

ಐಮಾರಾ ಜನಾಂಗದವರು ಬಳಸುವ ವಾಮಾಚಾರ ಮತ್ತು ಗಿಡಮೂಲಿಕೆಗಳ ಅಂಗಡಿಗಳನ್ನು ‘ವಿಚ್ ಬಜಾರ್’ (ಮಾಟಗಾತಿಯರ ಮಾರುಕಟ್ಟೆ) ಎನ್ನುವರು. ಇಲ್ಲಿ ಮಾರುವ ಲಾಮಾ ಭ್ರೂಣಗಳ ಗೊಂಬೆಗಳನ್ನು ಹೊಸ ಮನೆ ಅಥವಾ ವ್ಯಾಪಾರವನ್ನು ನಿರ್ಮಿಸುವಾಗ ಬಳಸುತ್ತಾರೆ. ಹೊಸ ನಿರ್ಮಾಣ ಮಾಡುವ ಮಾಲೀಕರು ಆಂಡಿಯನ್ ದೇವತೆ ಪಚಮಾಮ (ತಾಯಿ ಭೂಮಿ)ಗೆ ಅರ್ಪಣೆಯಾಗಿ ಕಟ್ಟಡದ ಮೂಲಾಧಾರದ ಕೆಳಗೆ ಈ ಲಾಮಾ ಭ್ರೂಣವನ್ನು ಹೂಳುತ್ತಾರೆ. ಪಚಮಾಮ ಕೆಲಸಗಾರರನ್ನು ರಕ್ಷಿಸುತ್ತಾನೆ ಮತ್ತು ವ್ಯಾಪಾರಕ್ಕೆ ಅದೃಷ್ಟವನ್ನು ತರುತ್ತಾನೆ ಎಂಬುದು ಅವರ ನಂಬಿಕೆ.



ಲಾ ಪಾಜ್ ನಗರದ ಎತ್ತರದ ವೀಕ್ಷಣಾ ಸ್ಥಳ ಮಿರಾಡೋರ್ ಕಿಲ್ಲಿ ಕಿಲ್ಲಿಯಲ್ಲಿನ ಸ್ಮಾರಕ